## ಕರ್ನಾಟಕ ಅರಣ್ಯ ಉತ್ಪನ್ನವನ್ನು ಸರ್ಕಾರದಿಂದ ಸರಬರಾಜು ಮಾಡುವ (ಒಪ್ಪಂದಗಳ ಪರಿಷ್ಕರಣೆ) ಅಧಿನಿಯಮ, 1987

### ಪ್ರಕರಣಗಳ ಕ್ರಮಪಟ್ಟಿ

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**ಪ್ರಕರಣಗಳು:**

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.
2. ಪರಿಭಾಷೆಗಳು.
3. ಅರಣ್ಯ ಉತ್ಪನ್ನದ ಮಾರಾಟ ಅಥವಾ ಸರಬರಾಜಿಗಾಗಿ ಒಪ್ಪಂದಗಳನ್ನು ಪರಿಷ್ಕರಿಸಲು ರಾಜ್ಯ ಸರ್ಕಾರದ ಅಧಿಕಾರ.
4. ಖರೀದಿದಾರರಿಗೆ ಮಾರಾಟ ಮಾಡುವ ಅಥವಾ ಸರಬರಾಜು ಮಾಡುವ ಅರಣ್ಯ ಉತ್ಪನ್ನದ ಬೆಲೆಯು ಮಾರುಕಟ್ಟೆ ಮೌಲ್ಯವನ್ನು ಮೀರಬಾರದು.
5. ಒಪ್ಪಂದಗಳನ್ನು ಸಮಾಪನಗೊಳಿಸಲು ಸರ್ಕಾರದ ಅಧಿಕಾರ.
6. ಖರೀದಿದಾರನು, ಒಂದು ತಿಂಗಳ ನೋಟೀಸನ್ನು ನೀಡಿದ ತರುವಾಯ ಒಪ್ಪಂದವನ್ನು ಸಮಾಪನಗೊಳಿಸಬಹುದು.
7. ಇತರ ಕಾನೂನುಗಳ ಪರಿಣಾಮ.
8. ನಿಯಮಗಳ ರಚನಾಧಿಕಾರ.

### ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**1989ರ ಅಧಿನಿಯಮ ಸಂಖ್ಯೆ 26.-** ಹಿಂದೆ, ಅರಣ್ಯೋತ್ಪನ್ನಗಳ ಸರಬರಾಜಿಗೆ ದೀರ್ಘಾವಧಿ ಒಪ್ಪಂದಗಳನ್ನು ಅರಣ್ಯೋತ್ಪನ್ನಗಳ ಲಭ್ಯತೆಯನ್ನು ನಿರ್ಧರಿಸದೆ ಮತ್ತು ಆ ಪ್ರದೇಶದ ಜೀವಿ- ಪರಿಸ್ಥಿತಿ ಹಾಗೂ ಪ್ರದೇಶ ಪರಿಸರದ ಮೇಲೆ ಅಂಥ ಒಪ್ಪಂದಗಳು ಉಂಟು ಮಾಡುವ ಪರಿಣಾಮವನ್ನು ಪರಿಗಣಿಸದೇ ಮಾಡಿಕೊಳ್ಳಲಾಗುತ್ತಿತ್ತು. ಬಹಳಷ್ಟು ಬಾರಿ, ಅಂಥ ಒಪ್ಪಂದಗಳಲ್ಲಿ ನ್ಯಾಯವೆಂದು ಪರಿಗಣಿಸಬಹುದಾದ ಬೆಲೆಯ ಸಂದಾಯಕ್ಕೆ ಏರ್ಪಾಟು ಇರಲಿಲ್ಲ. ಹೀಗಾಗಿ ರಾಜ್ಯಕ್ಕೆ ಇದರಿಂದ ಹಾನಿ ಉಂಟಾಗುತ್ತಿತ್ತು, ಅಲ್ಲದೆ ಹೀಗೆ ಮಾಡಿಕೊಂಡ ಕೆಲವು ಒಪ್ಪಂದಗಳು, ಅರಣ್ಯೋತ್ಪನ್ನಗಳು ಸಂಬಂಧಪಟ್ಟ ಪ್ರದೇಶಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಲಭ್ಯವಿಲ್ಲದಿದ್ದರೂ, ಭರವಸೆ ಆಧಾರದ ಮೇಲೆ ಸರಬರಾಜು ಮಾಡಬೇಕೆಂದು ಏರ್ಪಾಡು ಮಾಡುವುದರಿಂದ ಅನಗತ್ಯ ವ್ಯಾಜ್ಯಗಳಿಗೆ ಕಾರಣವಾಗಿದೆ.

ಆದ್ದರಿಂದ, ಆಗಿಂದಾಗ್ಗೆ ಪರಿಷ್ಕರಿಸಲಾದ ಕಾರ್ಯ ಯೋಜನಾ ನಿರ್ದೇಶನ, ಕಾರ್ಯಕ್ರಮಗಳು ಅಥವಾ ಪರಿಣಾಮಗಳು ಮತ್ತು ಅರಣ್ಯ ಶಾಸ್ತ್ರದ ಅಗತ್ಯತೆಗಳನ್ನು ಆಧರಿಸಿ, ಅರಣ್ಯ ಉತ್ಪನ್ನಗಳಿಗೆ ಸಂದಾಯವಾದ ಬೆಲೆಗಳು ನ್ಯಾಯವಾಗಿದೆ ಮತ್ತು ರಾಜ್ಯಕ್ಕೆ ವರಮಾನದಲ್ಲಿ ಯಾವುದೇ ನಷ್ಟ ಉಂಟಾಗಿಲ್ಲವೆಂಬುದನ್ನು ಖಚಿತಪಡಿಸುವ ಸಲುವಾಗಿ, ಅರಣ್ಯ ಉತ್ಪನ್ನಗಳ ಸರಬರಾಜಿಗೆ ಸಂಬಂಧಪಟ್ಟ ಕೆಲವು ಒಪ್ಪಂದಗಳ ನಿಬಂಧನೆಗಳನ್ನು ಆಗಿಂದಾಗ್ಗೆ ಪರಿಷ್ಕರಿಸುವ, ಬದಲಾಯಿಸುವ ಅಥವಾ ರದ್ದು ಪಡಿಸುವ ಮತ್ತು ರಾಜ್ಯದಲ್ಲಿಯ ಜೀವಿಪರಿಸ್ಥಿತಿ ಸಮತೋಲನವನ್ನು ಕಾಯ್ದುಕೊಂಡು ಬರುವ ಮತ್ತು ರಾಜ್ಯದಲ್ಲಿ ಪರಿಸರ ಮತ್ತು ವನ್ಯಜೀವಿಗಳನ್ನು ರಕ್ಷಿಸುವ ಮತ್ತು ಸುಧಾರಿಸುವ ದೃಷ್ಟಿಯಿಂದ ಒಪ್ಪಂದಗಳನ್ನು ರದ್ದುಗೊಳಿಸುವ ಅಧಿಕಾರಗಳನ್ನೂ ರಾಜ್ಯ ಸರ್ಕಾರವು ಹೊಂದಿರಬೇಕಾದುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಪತ್ರಿಕೆ) ಭಾಗ 4-2ಎ, ನಂ.597 ದಿನಾಂಕ 8-9-1987 ಪುಟ 7.)

****

## 1989ರ ಕರ್ನಾಟಕ ಅಧಿನಿಯಮ ಸಂಖ್ಯೆ 26

*(1989ರ ನವೆಂಬರ್ 30ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)*

## ಕರ್ನಾಟಕ ಅರಣ್ಯ ಉತ್ಪನ್ನವನ್ನು ಸರ್ಕಾರದಿಂದ ಸರಬರಾಜು ಮಾಡುವ (ಒಪ್ಪಂದಗಳ ಪರಿಷ್ಕರಣೆ) ಅಧಿನಿಯಮ, 1987

*(1989ರ ಸೆಪ್ಟೆಂಬರ್ 3ನೇ ದಿನಾಂಕದಂದು ರಾಷ್ಟ್ರಪತಿಯವರ ಅನುಮತಿ ಪಡೆಯಲಾಗಿದೆ)*

ಅರಣ್ಯ ಉತ್ಪನ್ನವನ್ನು ಸರಬರಾಜು ಮಾಡುವುದಕ್ಕೆ ಸಂಬಂಧಪಟ್ಟ ಕೆಲವೊಂದು ಒಪ್ಪಂದಗಳನ್ನು ಪರಿಷ್ಕರಿಸಲು ಮತ್ತು ರದ್ದುಪಡಿಸಲು ಕರ್ನಾಟಕ ಸರ್ಕಾರಕ್ಕೆ ಅಧಿಕಾರಗಳನ್ನು ಪ್ರದಾನ ಮಾಡುವುದಕ್ಕೆ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಒಂದು ಅಧಿನಿಯಮ.

ಆಗಿಂದಾಗ್ಗೆ ಪರಿಷ್ಕರಿಸಲಾದ ಕಾರ್ಯಯೋಜನಾ ನಿರ್ದೇಶನ, ಕಾರ್ಯ ಸ್ಕೀಮುಗಳು ಅಥವಾ ಪರಿಣಾಮಗಳನ್ನು ಆಧರಿಸಿ, ಅರಣ್ಯದ ವೈಜ್ಞಾನಿಕ ನಿರ್ವಹಣೆಯ ತತ್ವಗಳನ್ನು ಮತ್ತು ಅರಣ್ಯ ಶಾಸ್ತ್ರದ ಅಗತ್ಯತೆಗಳನ್ನು ಪಡೆಯಲು ಮತ್ತು ಅರಣ್ಯ ಉತ್ಪನ್ನಗಳಿಗೆ ಸಂದಾಯವಾದ ಬೆಲೆಗಳು ನ್ಯಾಯವಾಗಿವೆ ಮತ್ತು ವರಮಾನದಲ್ಲಿ ಯಾವುದೇ ನಷ್ಟ ರಾಜ್ಯಕ್ಕೆ ಉಂಟಾಗಿಲ್ಲವೆಂಬುದನ್ನು ಖಚಿತಗೊಳಿಸುವ ಸಲುವಾಗಿ ಅರಣ್ಯ ಉತ್ಪನ್ನಗಳ ಸರಬರಾಜಿಗೆ ಸಂಬಂಧಪಟ್ಟ ಕೆಲವು ಒಪ್ಪಂದಗಳ ನಿಬಂಧನೆಗಳನ್ನು ಆಗಿಂದಾಗ್ಗೆ ಪರಿಷ್ಕರಿಸುವ, ಬದಲಾಯಿಸುವ ಅಥವಾ ರದ್ದುಗೊಳಿಸುವ ಅಧಿಕಾರಗಳನ್ನು ರಾಜ್ಯ ಸರ್ಕಾರ ಹೊಂದಿರಬೇಕಾಗಿರುವುದು ಮತ್ತು ಜೀವಿ-ಪರಿಸ್ಥಿತಿ ಸಮತೋಲನವನ್ನು ಸಂರಕ್ಷಿಸುವ ಮತ್ತು ಕಾಯ್ದುಕೊಂಡು ಬರುವ ಮತ್ತು ಪರಿಸರವನ್ನು ಸಂರಕ್ಷಿಸುವ ಮತ್ತು ಸುಧಾರಣೆಗೊಳಿಸುವ ಮತ್ತು ಕರ್ನಾಟಕ ರಾಜ್ಯದಲ್ಲಿನ ಅರಣ್ಯಗಳನ್ನು ಮತ್ತು ವನ್ಯಜೀವಿಗಳನ್ನು ರಕ್ಷಿಸುವ ದೃಷ್ಟಿಯಿಂದ ಒಪ್ಪಂದಗಳನ್ನು ರದ್ದುಗೊಳಿಸುವ ಅಧಿಕಾರಗಳನ್ನು ಹೊಂದಿರಬೇಕಾಗಿರುವುದು ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳಿಗೆ ಉಪಬಂಧ ಕಲ್ಪಿಸುವುದು ಅವಶ್ಯವೆಂದು ಪರಿಗಣಿಸಿರುವುದರಿಂದ;

ಭಾರತ ಗಣರಾಜ್ಯದ ಮೂವತ್ತೆಂಟನೆಯ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಅರಣ್ಯ ಉತ್ಪನ್ನವನ್ನು ಸರ್ಕಾರದಿಂದ ಸರಬರಾಜು ಮಾಡುವ (ಒಪ್ಪಂದಗಳ ಪರಿಷ್ಕರಣೆ) ಅಧಿನಿಯಮ, 1987 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಯಲ್ಲಿ ಬರತಕ್ಕದ್ದು.

**2. ಪರಿಭಾಷೆಗಳು.-** (1) ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಒಪ್ಪಂದ" ಎಂಬುದು, ಯಾವುದೇ ಅರಣ್ಯ ಉತ್ಪನ್ನವನ್ನು ಯಾವೊಬ್ಬ ಖರೀದಿದಾರನಿಗೆ ಮಾರಾಟ ಮಾಡಲು ಅಥವಾ ಸರಬರಾಜು ಮಾಡಲು ಅಥವಾ ಯಾವೊಬ್ಬ ಖರೀದಿದಾರನಿಗೆ ಯಾವುದೇ ಅರಣ್ಯ ಉತ್ಪನ್ನವನ್ನು ದೀರ್ಘಾವಧಿಗೆ ಪ್ರತಿಫಲಕ್ಕಾಗಿ ಸಂಗ್ರಹ ಮಾಡಲು ಮತ್ತು ತೆಗೆದುಕೊಂಡು ಹೋಗಲು ಅನುಮತಿಸಲು ರಾಜ್ಯ ಸರ್ಕಾರವು ಅದರಲ್ಲಿ ನಿರ್ದಿಷ್ಟಪಡಿಸಿದ ನಿಬಂಧನೆಗಳು ಮತ್ತು ಷರತ್ತುಗಳಿಗೆ ಒಳಪಟ್ಟು ತನ್ಮೂಲಕ ಒಪ್ಪುವ ಅಥವಾ ಒಪ್ಪಿರುವಂಥ ಯಾವುದೇ ಕರಾರು, ಲೈಸನ್ಸು, ಬಂಧಪತ್ರ, ವಿಲೇಖ ಅಥವಾ ಅನುದಾನ ಅಥವಾ ಇತರ ದಸ್ತಾವೇಜನ್ನು ಒಳಗೊಳ್ಳುತ್ತದೆ;

(ಬಿ) "ಅರಣ್ಯ ಉತ್ಪನ್ನ"ವು ಕರ್ನಾಟಕ ಅರಣ್ಯ ಅಧಿನಿಯಮ, 1963 (1964ರ ಕರ್ನಾಟಕ ಅಧಿನಿಯಮ 5)ರಲ್ಲಿ ಅದಕ್ಕೆ ನೀಡಲಾದ ಅರ್ಥವನ್ನು ಹೊಂದಿರತಕ್ಕದ್ದು;

(ಸಿ) "ದೀರ್ಘಾವಧಿ" ಎಂದರೆ ಹನ್ನೆರಡು ತಿಂಗಳನ್ನು ಮೀರುವ ಯಾವುದೇ ಕಾಲಾವಧಿ;

(ಡಿ) "ಬೆಲೆ" ಯು ಅರಣ್ಯ ಉತ್ಪನ್ನದ ಮಾರಾಟ ಅಥವಾ ಸರಬರಾಜಿಗಾಗಿ ಯಾವೊಬ್ಬ ವ್ಯಕ್ತಿಯು ರಾಜ್ಯ ಸರ್ಕಾರಕ್ಕೆ ಪ್ರತಿಫಲವಾಗಿ ಅಥವಾ ಅನ್ಯಥಾ ಸಂದಾಯ ಮಾಡಿದ ಅಥವಾ ಸಂದಾಯ ಮಾಡಬೇಕಾದ ಬೆಲೆ ಅಥವಾ ದರ ಅಥವಾ ಮೌಲ್ಯವನ್ನು ಒಳಗೊಳ್ಳುತ್ತದೆ;

(ಇ) "ಖರೀದಿದಾರ" ಎಂದರೆ ಯಾವುದೇ ಒಪ್ಪಂದದ ಮೇರೆಗೆ ರಾಜ್ಯ ಸರ್ಕಾರದಿಂದ ಯಾವುದೇ ಅರಣ್ಯ ಉತ್ಪನ್ನವನ್ನು ಖರೀದಿಸುವ ಅಥವಾ ಸರಬರಾಜು ಪಡೆದ ಅಥವಾ ಅನುದಾನ ಹೊಂದಿದ ಅಥವಾ ಪಡೆದ ಯಾವುದೇ ಕಂಪನಿ ಅಥವಾ ಸಂಸ್ಥೆ ಅಥವಾ ವ್ಯಕ್ತಿಗಳ ನಿಕಾಯ, ನಿಗಮಿತವಾಗಿರಲಿ ಅಥವಾ ಇಲ್ಲದಿರಲಿ ಅವುಗಳೂ ಸೇರಿದಂತೆ ಯಾವೊಬ್ಬ ವ್ಯಕ್ತಿ ಎಂದರ್ಥ ಮತ್ತು ಖರೀದಿದಾರ ಎಂಬ ಪದವನ್ನು ತದನುಸಾರವಾಗಿ ಅರ್ಥೈಸತಕ್ಕದ್ದು.

(2) ಈ ಅದಿನಿಯಮದಲ್ಲಿ ಬಳಸಲಾದ ಆದರೆ ಪರಿಭಾಷಿಸಿಲ್ಲದ ಪದಗಳು ಮತ್ತು ಪದಪ್ರಯೋಗಗಳು, ಕರ್ನಾಟಕ ಅರಣ್ಯ ಅಧಿನಿಯಮ, 1963 (1964ರ ಕರ್ನಾಟಕ ಅಧಿನಿಯಮ 5) ರಲ್ಲಿ ಅವುಗಳಿಗೆ ನೀಡಲಾಗಿರುವ ಅರ್ಥವನ್ನೇ ಹೊಂದಿರತಕ್ಕದ್ದು.

**3. ಅರಣ್ಯ ಉತ್ಪನ್ನದ ಮಾರಾಟ ಅಥವಾ ಸರಬರಾಜಿಗಾಗಿ ಒಪ್ಪಂದಗಳನ್ನು ಪರಿಷ್ಕರಿಸಲು ರಾಜ್ಯ ಸರ್ಕಾರದ ಅಧಿಕಾರ.**- ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಅಥವಾ ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಂದು ಅಸ್ತಿತ್ವದಲ್ಲಿರುವ ಯಾವುದೇ ಒಪ್ಪಂದದಲ್ಲಿ ಅಥವಾ ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಂದು ಅಥವಾ ಆ ತರುವಾಯ ಯಾವೊಬ್ಬ ಖರೀದಿದಾರನೊಂದಿಗೆ ರಾಜ್ಯ ಸರ್ಕಾರವು ಮಾಡಿಕೊಂಡ ಯಾವುದೇ ಒಪ್ಪಂದದಲ್ಲಿ ಏನೇ ಒಳಗೊಂಡಿದ್ದರೂ, ಈ ಮುಂದಿನ ಒಂದು ಅಥವಾ ಹೆಚ್ಚು ಉದ್ದೇಶಗಳಿಗಾಗಿ, ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸುವ ಆದೇಶದ ಮೂಲಕ, ಅಂಥ ಯಾವುದೇ ಒಪ್ಪಂದದ ಯಾವುವೇ ನಿಬಂಧನೆಗಳು ಮತ್ತು ಷರತ್ತುಗಳಿಗೆ ಸೇರಿಸುವುದು, ಪ್ರತಿಸ್ಥಾಪಿಸುವುದು, ಅದನ್ನು ಬಿಟ್ಟು ಬಿಡುವುದು, ಮಾರ್ಪಾಟು ಮಾಡುವುದು ಅಥವಾ ಅನ್ಯಥಾ ತಿದ್ದುಪಡಿ ಮಾಡುವುದು ರಾಜ್ಯ ಸರ್ಕಾರಕ್ಕೆ ಕಾನೂನುಬದ್ಧವಾಗಿರತಕ್ಕದ್ದು, ಎಂದರೆ: -

(ಎ) ಅಂಥ ಒಪ್ಪಂದದಲ್ಲಿ ಮಾರಾಟ ಮಾಡಬೇಕೆಂದು ಅಥವಾ ಸರಬರಾಜು ಮಾಡಬೇಕೆಂದು ಒಪ್ಪಂದ ಮಾಡಿಕೊಳ್ಳಲಾದ ಅರಣ್ಯ ಉತ್ಪನ್ನದ ಬೆಲೆಯ ಪರಿಷ್ಕರಣೆ ಅಥವಾ ನಿಯತಕಾಲಿಕ ಪರಿಷ್ಕರಣೆಯ ಬಗ್ಗೆ, ಸಂದರ್ಭಾನುಸಾರ, ಅಂಥ ಯಾವುದೇ ಪರಿಷ್ಕರಣೆ ಅಥವಾ ನಿಯತಕಾಲಿಕ ಪರಿಷ್ಕರಣೆಗಾಗಿ ಉಪಬಂಧ ಕಲ್ಪಿಸದಿರುವಲ್ಲಿ, ಉಪಬಂಧ ಕಲ್ಪಿಸುವುದು ಮತ್ತು ಒಪ್ಪಂದದಲ್ಲಿ ಅಂಥ ನಿಯತಕಾಲಿಕ ಪರಿಷ್ಕರಣೆಯ ಬಗ್ಗೆ ಉಪಬಂಧವಿರುವಲ್ಲಿ, ಪರಿಷ್ಕರಣೆಯ ಅವಧಿಯನ್ನು ಕಡಿಮೆಗೊಳಿಸಲು ಅಥವಾ ಹೆಚ್ಚು ಮಾಡಲು ಉಪಬಂಧ ಕಲ್ಪಿಸುವುದು:

ಪರಂತು, ಒಮ್ಮೆ ನಿಗದಿಯಾದ ಬೆಲೆಯು, ಅಂಥ ನಿಗದಿಯು ಜಾರಿಯಲ್ಲಿ ಬಂದ ದಿನಾಂಕದಿಂದ ಕನಿಷ್ಠ ಪಕ್ಷ ಹನ್ನೆರಡು ತಿಂಗಳುಗಳ ಅವಧಿಯವರೆಗೆ ರಾಜ್ಯ ಸರ್ಕಾರದಿಂದ ಪರಿಷ್ಕರಣೆಗೆ ಗುರಿಯಾಗತಕ್ಕದ್ದಲ್ಲ.

(ಬಿ) ಅಂಥ ಅರಣ್ಯ ಉತ್ಪನ್ನದ ಲಭ್ಯತೆಯನ್ನು ಗಮನಿಸಿ, ಖರೀದಿದಾರನಿಗೆ ಮಾರಾಟ ಮಾಡಲು ಅಥವಾ ಸರಬರಾಜು ಮಾಡಲು ಒಪ್ಪಿಕೊಂಡಿದ್ದ ಅರಣ್ಯ ಉತ್ಪನ್ನದ ಪ್ರಮಾಣವನ್ನು ಮಾರ್ಪಾಟು ಮಾಡಲು ಉಪಬಂಧ ಕಲ್ಪಿಸುವುದು;

(ಸಿ) ಅರಣ್ಯ ಉತ್ಪನ್ನದ ಲಭ್ಯತೆಯನ್ನು ಗಮನಿಸಿ ಅಥವಾ ಕಾರ್ಯ ಯೋಜನಾ ನಿರ್ದೇಶನ, ಕಾರ್ಯ ಸ್ಕೀಮುಗಳು ಅಥವಾ ಪರಿಣಾಮಗಳನ್ನು ಆಧರಿಸಿ, ಅರಣ್ಯದ ವೈಜ್ಞಾನಿಕ ನಿರ್ವಹಣೆಯ ತತ್ವಗಳು ಮತ್ತು ಅರಣ್ಯ ಶಾಸ್ತ್ರದ ಅಗತ್ಯತೆಗಳನ್ನು ಪಡೆಯಲು ಖರೀದಿದಾರನಿಗೆ ಹಂಚಿಕೆಯಾದ ಅಥವಾ ಕಾರ್ಯ ನಿರ್ವಹಿಸಲು ಅನುಮತಿ ನೀಡಿದ ಪ್ರದೇಶಗಳನ್ನು ಮಾರ್ಪಾಟು ಮಾಡುವುದು, ಪರಿಮಿತಿಗೊಳಿಸುವುದು, ಬದಲಾಯಿಸುವುದು, ಸ್ಥಳಾಂತರಗೊಳಿಸುವುದು ಅಥವಾ ರದ್ದುಗೊಳಿಸುವುದಕ್ಕೆ ಉಪಬಂಧ ಕಲ್ಪಿಸುವುದು;

(ಡಿ) ಉತ್ತಮ ರೀತಿಯಲ್ಲಿ ಅರಣ್ಯವನ್ನು ನಿರ್ವಹಿಸುವುದು ಮತ್ತು ಮರಗಳನ್ನು ಕೀಳುವುದು ಈ ದೃಷ್ಟಿಯಿಂದ ಖರೀದಿದಾರ ಅಥವಾ ಅವನ ಏಜೆಂಟನ ಬದಲಾಗಿ, ರಾಜ್ಯ ಸರ್ಕಾರ ಅಥವಾ ಅದರ ಸ್ವಾಮ್ಯ

ಅಥವಾ ನಿಯಂತ್ರಣದಲ್ಲಿರುವ ನಿಗಮವು ಅರಣ್ಯವನ್ನು ನಿರ್ವಹಿಸುವುದಕ್ಕೆ ಅಥವಾ ಅಲ್ಲಿಂದ ಮರಗಳನ್ನು ಕೀಳುವುದಕ್ಕೆ ಉಪಬಂಧ ಕಲ್ಪಿಸುವುದು;

(ಇ) ಕರ್ನಾಟಕ ರಾಜ್ಯದಲ್ಲಿ ಜೀವಿ-ಪರಿಸ್ಥಿತಿ ಸಮತೋಲನವನ್ನು ರಕ್ಷಿಸುವುದು;

(ಎಫ್) ಕರ್ನಾಟಕ ರಾಜ್ಯದಲ್ಲಿ ಪರಿಸರವನ್ನು ಸಂರಕ್ಷಿಸುವುದು ಮತ್ತು ಸುಧಾರಣೆಗೊಳಿಸುವುದು ಮತ್ತು ಅರಣ್ಯಗಳನ್ನು ಮತ್ತು ವನ್ಯ ಜೀವಿಗಳನ್ನು ರಕ್ಷಿಸುವುದು:

ಪರಂತು, ರಾಜ್ಯ ಸರ್ಕಾರವು, (ಇ) ಮತ್ತು (ಎಫ್) ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಉದ್ದೇಶಗಳ ಮುಂದುವರಿಕೆಯಲ್ಲಿ ಒಪ್ಪಂದವನ್ನು ಏಕೆ ರದ್ದುಗೊಳಿಸತಕ್ಕದ್ದಲ್ಲ ಅಥವಾ ಮಾರ್ಪಾಟುಗೊಳಿಸತಕ್ಕದ್ದಲ್ಲ ಎಂಬುದಕ್ಕೆ ಕಾರಣ ತೋರಿಸಲು ಖರೀದಿದಾರನಿಗೆ ಯುಕ್ತ ಅವಕಾಶವನ್ನು ನೀಡಿದ ತರುವಾಯ, ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಂದು ಅಸ್ತಿತ್ವದಲ್ಲಿದ್ದ ಅಥವಾ ಆ ತರುವಾಯ ಮಾಡಿಕೊಂಡ ಯಾವುದೇ ಒಪ್ಪಂದವನ್ನು ರದ್ದುಗೊಳಿಸಬಹುದು ಅಥವಾ ಮಾರ್ಪಾಟುಗೊಳಿಸಬಹುದು ಮತ್ತು ಅಂಥ ಕಾರಣ ತೋರಿಸುವವರೆಗೆ ಯಾವುದೇ ಅಂಥ ಒಪ್ಪಂದದ ನೆರವೇರಿಕೆಯನ್ನು ಅಥವಾ ಆ ಮುಂದಿನ ನೆರವೇರಿಕೆಯನ್ನು ತಡೆಹಿಡಿಯಬಹುದು.

**4. ಖರೀದಿದಾರರಿಗೆ ಮಾರಾಟ ಮಾಡುವ ಅಥವಾ ಸರಬರಾಜು ಮಾಡುವ ಅರಣ್ಯ ಉತ್ಪನ್ನದ ಬೆಲೆಯು ಮಾರುಕಟ್ಟೆ ಮೌಲ್ಯವನ್ನು ಮೀರಬಾರದು.**-(1) 3ನೇ ಪ್ರಕರಣದ ಅಡಿಯಲ್ಲಿ ಬೆಲೆಯ ಯಾವುದೇ ಪರಿಷ್ಕರಣೆಯ ಕಾಲದಲ್ಲಿ ನಿಗದಿಪಡಿಸಬೇಕಾದ ಅರಣ್ಯ ಉತ್ಪನ್ನದ ಮಾರಾಟದ ಅಥವಾ ಸರಬರಾಜಿನ ಬೆಲೆಯು, ನಿಯಮಿಸಿದ ರೀತಿಯಲ್ಲಿ ರಾಜ್ಯ ಸರ್ಕಾರವು ನಿರ್ಧರಿಸಬಹುದಾದ ಅಂಥ ಪರಿಷ್ಕರಣೆಯ ಕಾಲದ ಅರಣ್ಯ ಉತ್ಪನ್ನದ ಮಾರುಕಟ್ಟೆ ಮೌಲ್ಯವನ್ನು ಮೀರತಕ್ಕದ್ದಲ್ಲ.

(2) ಪರಿಷ್ಕರಣೆಯ ಕಾಲದಲ್ಲಿ ಒಮ್ಮೆಗೆ ಹನ್ನೆರಡು ತಿಂಗಳನ್ನು ಮೀರಿದ ಅವಧಿಗೆ ಬೆಲೆಯನ್ನು ನಿಗದಿಗೊಳಿಸಿರುವಲ್ಲಿ, ಪರಿಷ್ಕೃತ ಬೆಲೆಯು ಜಾರಿಯಲ್ಲಿರಬೇಕಾದ ಅವಧಿಯಲ್ಲಿ ಇರುವ ಅರಣ್ಯ ಉತ್ಪನ್ನದ ಮಾರುಕಟ್ಟೆ ಮೌಲ್ಯದ ನಿರೀಕ್ಷಿತ ಏರಿಕೆಗಾಗಿ ರಾಜ್ಯ ಸರ್ಕಾರವು ಬೆಲೆಯಲ್ಲಿ ವಾರ್ಷಿಕ ಹೆಚ್ಚಳಕ್ಕೆ ಮಾರ್ಪಾಟು ಮಾಡಬಹುದು.

**5. ಒಪ್ಪಂದಗಳನ್ನು ಸಮಾಪನಗೊಳಿಸಲು ಸರ್ಕಾರದ ಅಧಿಕಾರ.**- (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಅಥವಾ ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಂದು ಅಸ್ತಿತ್ವದಲ್ಲಿರುವ ಯಾವುದೇ ಒಪ್ಪಂದದಲ್ಲಿ ಅಥವಾ ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಂದು ಅಥವಾ ಆ ತರುವಾಯ, ಯಾವೊಬ್ಬ ಖರೀದಿದಾರನೊಂದಿಗೆ ರಾಜ್ಯ ಸರ್ಕಾರ ಮಾಡಿಕೊಳ್ಳಬಹುದಾದ ಯಾವುದೇ ಒಪ್ಪಂದದಲ್ಲಿ ಏನೇ ಒಳಗೊಂಡಿದ್ದರೂ, ಖರೀದಿದಾರನಿಂದಾದ, ಆಗಿಂದಾಗ್ಗೆ ತಿದ್ದುಪಡಿಯಾದಂಥ ಒಪ್ಪಂದದ ಯಾವುದೇ ನಿಬಂಧನೆ ಮತ್ತು ಷರತ್ತುಗಳ ಉಲ್ಲಂಘನೆಗಾಗಿ, ರಾಜ್ಯ ಸರ್ಕಾರವು, ಯಾವುದೇ ಕಾಲದಲ್ಲಿ ಒಪ್ಪಂದವನ್ನು ಸಮಾಪನಗೊಳಿಸಬಾರದೇಕೆಂಬುದಕ್ಕೆ ಕಾರಣವನ್ನು ತೋರಿಸಲು ಅವನಿಗೆ ಯುಕ್ತ ಅವಕಾಶವನ್ನು ನೀಡಿದ ತರುವಾಯ ಮತ್ತು ಅಂಥ ಸಮಾಪನದ ಬಗ್ಗೆ ಅವನಿಗೆ ಒಂದು ತಿಂಗಳ ನೋಟೀಸನ್ನು ನೀಡಿದ ತರುವಾಯ, ಅಂಥ ಯಾವುದೇ ಒಪ್ಪಂದವನ್ನು ಸಮಾಪನಗೊಳಿಸಬಹುದು.

(2) ರಾಜ್ಯ ಸರ್ಕಾರದ ತೀರ್ಮಾನವು ಅಂಥ ಸಂದರ್ಭಗಳಲ್ಲಿ ಅಂತಿಮವಾಗಿರತಕ್ಕದ್ದು.

**6. ಖರೀದಿದಾರನು, ಒಂದು ತಿಂಗಳ ನೋಟೀಸನ್ನು ನೀಡಿದ ತರುವಾಯ ಒಪ್ಪಂದವನ್ನು ಸಮಾಪನಗೊಳಿಸಬಹುದು.**- 3ನೇ ಪ್ರಕರಣದ ಅಡಿಯಲ್ಲಿ, ಒಪ್ಪಂದದ ನಿಬಂಧನೆಗಳು ಮತ್ತು ಷರತ್ತುಗಳಲ್ಲಿ ಮಾಡಿದ ಯಾವುದೇ ತಿದ್ದುಪಡಿಯು ಅಥವಾ ಆ ಪ್ರಕರಣದ ಅಡಿಯಲ್ಲಿ, ಬೆಲೆಯಲ್ಲಿ ಮಾಡಿದ ಯಾವುದೇ ಪರಿಷ್ಕರಣೆಯು ಖರೀದಿದಾರನಿಗೆ ಅಂಗೀಕಾರಾರ್ಹವಾಗದಿದ್ದರೆ, ಅವನು ತನ್ನ ಆಯ್ಕೆಯ ಮೇರೆಗೆ, ಸಂದರ್ಭಾನುಸಾರ, ನಿಬಂಧನೆಗಳು ಮತ್ತು ಷರತ್ತುಗಳಲ್ಲಿಯ ತಿದ್ದುಪಡಿ ಅಥವಾ ಬೆಲೆಯ ಪರಿಷ್ಕರಣೆಯನ್ನು ತನಗೆ ತಿಳಿಸಿದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗಾಗಿ ರಾಜ್ಯ ಸರ್ಕಾರಕ್ಕೆ ಲಿಖಿತದಲ್ಲಿ ಒಂದು ತಿಂಗಳ ನೋಟೀಸನ್ನು ಕೊಡುವ ಮೂಲಕ ಒಪ್ಪಂದವನ್ನು ಸಮಾಪನಗೊಳಿಸಬಹುದು

ಮತ್ತು ತದನುಸಾರವಾಗಿ ಒಪ್ಪಂದವು ನೋಟೀಸಿನ ಅವಧಿಯು ಮುಕ್ತಾಯವಾದ ಕೂಡಲೇ ಸಮಾಪನವಾಗತಕ್ಕದ್ದು.

7. **ಇತರ ಕಾನೂನುಗಳ ಪರಿಣಾಮ.**- ಈ ಅಧಿನಿಯಮದಲ್ಲಿ ಉಪಬಂಧಿಸಿರುವುದನ್ನುಳಿದು, ಈ ಅಧಿನಿಯಮದ ಉಪಬಂಧಗಳು ಇತರ ಯಾವುವೇ ಕಾನೂನುಗಳಿಗೆ ಹೆಚ್ಚಿಗೆಯಾಗಿ ಇರತಕ್ಕದ್ದಲ್ಲದೆ ಅಲ್ಪೀಕರಿಸತಕ್ಕದ್ದಲ್ಲ.

8. **ನಿಯಮಗಳ ರಚನಾಧಿಕಾರ.**- (1) ರಾಜ್ಯ ಸರ್ಕಾರವು, ಪೂರ್ವಪ್ರಕಟಣೆಯ ಷರತ್ತುಗಳಿಗೆ ಒಳಪಟ್ಟು ಮತ್ತು ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಪೂರ್ವೋಕ್ತ ಉಪಬಂಧದ ಸಾಮಾನ್ಯತೆಗೆ ಪ್ರತಿಕೂಲವಾಗದಂತೆ ಅಂಥ ನಿಯಮಗಳನ್ನು ಈ ಮುಂದಿನ ಎಲ್ಲ ಅಥವಾ ಯಾವುವೇ ವಿಷಯಗಳಿಗಾಗಿ, ಎಂದರೆ: -

(ಎ) ಒಪ್ಪಂದದಲ್ಲಿ ಮಾಡಲು ಉದ್ದೇಶಿಸಿದ ತಿದ್ದುಪಡಿಯ ಅಥವಾ 3ನೇ ಪ್ರಕರಣದ ಅಡಿಯಲ್ಲಿ ಮಾಡಲು ಉದ್ದೇಶಿಸಲಾದ ಬೆಲೆಯ ಯಾವುದೇ ಪರಿಷ್ಕರಣೆಯ ನೋಟೀಸನ್ನು ಕೊಡುವುದಕ್ಕಾಗಿ ಮತ್ತು ಪ್ರಸ್ತಾವದ ವಿರುದ್ಧ ಕಾರಣವನ್ನು ತೋರಿಸಲು ಖರೀದಿದಾರನಿಗೆ ಒಂದು ಅವಕಾಶವನ್ನು ಕೊಡುವುದಕ್ಕಾಗಿ;

(ಬಿ) 4ನೇ ಪ್ರಕರಣದ ಉದ್ದೇಶಗಳಿಗಾಗಿ, ಮಾರುಕಟ್ಟೆ ಮೌಲ್ಯವನ್ನು ಯಾವ ತತ್ವಗಳ ಮೇಲೆ, ಯಾವ ರೀತಿಯಲ್ಲಿ ಮತ್ತು ಯಾವ ಪ್ರಾಧಿಕಾರದಿಂದ ನಿರ್ಧರಿಸತಕ್ಕದ್ದು ಎಂಬುದಕ್ಕಾಗಿ:

-ರಚಿಸಬಹುದು.

(3) ಈ ಪ್ರಕರಣದ ಅಡಿಯಲ್ಲಿ ರಚಿಸಲಾದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಲಾದ ತರುವಾಯ, ಸಾಧ್ಯವಾದಷ್ಟು ಬೇಗನೆ, ರಾಜ್ಯ ವಿಧಾನಮಂಡಲವು ಅಧಿವೇಶನದಲ್ಲಿದ್ದರೆ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಒಂದು ಅಧಿವೇಶನ ಅಥವಾ ಎರಡು ಅಥವಾ ಹೆಚ್ಚಿನ ಅನುಕ್ರಮ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಅಧಿವೇಶನದಲ್ಲಿರುವಾಗ ಮಂಡಿಸತಕ್ಕದ್ದು ಮತ್ತು ಹಾಗೆ ಮಂಡಿಸಲಾದ ಅಧಿವೇಶನ ಅಥವಾ ನಿಕಟೋತ್ತರ ಅಧಿವೇಶನಗಳು ಮುಕ್ತಾಯವಾಗುವ ಮೊದಲು ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಉಭಯ ಸದನಗಳು ಒಪ್ಪಿದರೆ ಅಥವಾ ಯಾವುದೇ ನಿಯಮವನ್ನು, ರಚಿಸಬಾರದೆಂದು ಉಭಯ ಸದನಗಳು ಒಪ್ಪಿದರೆ, ತದನಂತರ, ನಿಯಮವು, ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೀತಿಯಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು, ಆ ನಿಯಮದ ಅಡಿಯಲ್ಲಿ ಹಿಂದೆ ಮಾಡಲಾದ ಯಾವುದರ ಮಾನ್ಯತೆಗೂ ಪ್ರತಿಕೂಲವಾಗಿರತಕ್ಕದ್ದಲ್ಲ.

* * * *